ಈ ಪ್ರಶ್ನೋತ್ತರ ಕಾಲದ ಬಗ್ಗೆ ಸೀರಿಯಸ್‌ನೆಸ್ ಇಲ್ಲ ಎನ್ನುವುದು ಸ್ಪಷ್ಟವಾಗುತ್ತದೆ.
(ಗೊಂದಲ)

ಶ್ರೀ ಎಂ.ವಿ. ವೆಂಕಟ್ಟಪ್ಪ :- ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಉತ್ತರದಲ್ಲಿ 167 ಕೋಟಿ ರೂಪಾಯಿ, 75 ಕೋಟಿ ರೂಪಾಯಿ, ಮತ್ತು 18 ಕೋಟಿ ರೂಪಾಯಿ ಎಂದು ಹೇಳಿದ್ದಾರೆ. ಮತ್ತು ಈಗಾಗಲೇ ಪ್ರಾರಂಭವಾಗಿದೆ ಎಂದು ಹೇಳಿದ್ದೀರಿ , ಈ ಮನೆಗಳು ಯಾವಾಗ ಪ್ರಾರಂಭವಾಯಿತು ತಿಳಿಸಿ.

ಶ್ರೀ ಗೋಪಿನಾಥ ಆರ್ ಸಾಂಡ್ರ :- ಮಾನ್ಯ ಅಧ್ಯಕ್ಷರೆ, 1994-95 ಪ್ರಕಾರ ಅಂಕಿಸಂಖ್ಯೆಗಳನ್ನು ಕೊಟ್ಟಿದ್ದೇವೆ. ಹೋದವರ್ಷ ಬ್ಯಾಕ್‌ಲಾಗ್ ಉಳಿದಿತ್ತು. ಅದರ ಸಲುವಾಗಿ ಹಣ ಕೊಟ್ಟಿದ್ದೇವೆ. ಈಗ ಮತ್ತೆ ಹಣ ಬಿಡುಗಡೆ ಮಾಡುತ್ತೇವೆ.

ಶ್ರೀ ಎಂ.ವಿ. ವೆಂಕಟಪ್ಪ :- ನೀವು ಆ ಮನೆಗಳನ್ನು ಹೌಸಿಂಗ್ ಬೋರ್ಡ್‌ಗೆ ಕೊಡುತ್ತೀರೋ ಹೇಗೆ? ಅಷ್ಟೇ ನನಗೆ ಬೇಕಾಗಿರುವುದು.

ಶ್ರೀ ಆರ್. ಗೋಪಿನಾಥ್ ಸಾಂಡ್ರಾ : ಹೌಸಿಂಗ್ ಬೋರ್ಡ್ ಪ್ರಶ್ನೆ ಬರುವುದೇ ಇಲ್ಲ. ಟಾಸ್ಕ್‌ಫೋರ್ಸ್‌ಕಮಿಟಿಯವರು ಯಾವರೀತಿಯ ನಿರ್ಣಯ ತೆಗೆದುಕೊಳ್ಳುತ್ತಾರೆ. ಆ ರೀತಿ ಜಾರಿಯಲ್ಲಿ ಬರುತ್ತದೆ.

ವಿಷಯ : ರಾಜ್ಯದಲ್ಲಿ ಭೂಮಾಪಕರ ಹುದ್ದೆಗಳ ಭರ್ತಿ.

ಚುಕ್ಕೆಗುರುತಿನ ಪ್ರಶ್ನೆ ಸಂಖ್ಯೆ : 119 (408)
ಶ್ರೀ ವಿ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಸರ್ವೇಯರ್ ಹುದ್ದೆಗಳು ಎಷ್ಟು ಖಾಲಿ ಇವೆ.
ಆ) ಅದನ್ನು ಯಾವಾಗ ಭರ್ತಿ ಮಾಡಲಾಗುವುದು
ಇ) ಹುದ್ದೆಗಳನ್ನು ಜಾಸ್ತಿ ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ?

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು)

ಅ) 1.437.
ಆ) ಇತ್ತೀಚೆಗಷ್ಟೆ, ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಕ್ಕೆ ತಿದ್ದುಪಡಿ ಮಾಡಲಾಗಿದೆ. ದಿನಾಂಕ : 21-7-1994ರಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಕೆಯು ಹೊರಡಿಸಿರುವ 1994 ರ ಕರ್ನಾಟಕ ನಾಗರೀಕ ಸೇವಾ (ಜಿಲ್ಲಾ ವೃಂದಗಳ ನೇಮಕಾತಿ) ನಿಯಮಗಳಡಿಯಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ.
ಇ) ಸಧ್ಯಕ್ಕೆ ಇಲ್ಲ.

ಪ್ರಶ್ನೆ ಸಂಖ್ಯೆ : 408
(ಉತ್ತರವನ್ನು ಲಗತ್ತಿಸಲಾಗಿದೆ)

ಶ್ರೀ ಎ.ರುಕ್ಮಯ್ಯ ಪೂಜಾರಿ : ಈಗ ಸರ್ವೆಯರ್ ಇಲ್ಲದೆ ತುಂಬ ಸಮಸ್ಯೆಯಾಗಿದೆ ಭೂಸುಧಾರಣಾ ಕಾನೂನು ಪ್ರಕಾರ ತೀರ್ಮಾನವಾದಂಥ ಜಮೀನನ್ನು ಅಳತೆ ಮಾಡುವುದಕ್ಕೂ ಕೂಡ ಸರ್ವೇಯರ್ ಇಲ್ಲ. ಅರ್ಜಿ ಹಾಕಿ ಎರಡು ಮೂರು ತಿಂಗಳು ಕಳೆದರೂ ಸಹ ಅಳತೆ ಹಾಕಲಿಕ್ಕೆ ಯಾರು ಸಿಗಲಿಲ್ಲ. ಏಕೆಂದರೆ ಸರ್ವೇಯರನ್ನು ತಕ್ಕ ಪ್ರಮಾಣದಲ್ಲಿ ಒದಗಿಸಿಲ್ಲ ಸರ್ಕಾರ. ಇನ್ನು ಜಮೀನಿನ ಪೂರ್ತಿ ಹಕ್ಕು ರೈತರಿಗೆ ಬಂದಿಲ್ಲ. ಏಕೆಂದರೆ ಆರ್‌ಟಿಸಿ ಬದಲಾವಣೆಯಾಗಬೇಕು. ಆರ್‌ಟಿಸಿ ಬದಲಾವಣೆಯಾಗಿ ಸರ್ವೇಯರ್ ಬಂದು ಅಳತೆ ಮಾಡಿದಾಗ ಆ ರೆಕಾರ್ಡ್ಸ್ ಪೂರ್ತಿಯಾಯಿತು ಎಂದು ಲೆಕ್ಕ. ಆ ರೀತಿ ಪೂರ್ತಿ ಮಾಡಬೇಕಾದರೆ ಬೇಕಾದಷ್ಟು ಸರ್ವೇಯರ್ ಬೇಕಾಗುತ್ತದೆ. ಹಾಗಾಗಿ ಖಾಲೀ ಇರತಕ್ಕ ಸರ್ವೇಯರನ್ನು ಯಾವ ರೀತಿ ಭರ್ತಿ ಮಾಡುತ್ತೀರಿ ಮತ್ತು ಇನ್ನೂ ಕೂಡ ಜಾಸ್ತಿ ಸರ್ವೇಯರ್‌ಗಳು ಬೇಕಾಗಿದ್ದು ಇನ್ನು ಹೆಚ್ಚಿನ ಹುದ್ದೆಗಳನ್ನು ಮಂಜೂರು ಮಾಡಿ ಸರ್ವೇಯರನ್ನು ಒದಗಿಸಿಕೊಡುತ್ತೀರಾ ಎಂದು ಕೇಳುತ್ತಿದ್ದೇನೆ.

ಶ್ರೀ ಧರ್ಮಸಿಂಗ್ : ಸಭಾದ್ಯಕ್ಷರೇ, ಕರ್ನಾಟಕರಾಜ್ಯದಲ್ಲಿ ಸರ್ವೇಯರ್ ಹುದ್ದೆಗಳನ್ನು ಭರ್ತಿ ಮಾಡತಕ್ಕಂಥದ್ದು ಬಹಳ ದಿವಸದಿಂದ ಇದೆ. ನಾನು ಈ ಇಲಾಖೆಯನ್ನು ವಹಿಸಿಕೊಂಡ ಮೇಲೆ ಈ ಡಿಸ್ಟ್ರಿಕ್ಟ್ ಲೆವೆಲ್ ರಿಕ್ರೂಟ್‌ಮೆಂಟ್ ಕಮಿಟಿ ಮಾಡಬೇಕು ಎಂದು ಹೇಳಿ ಡಿಸಿಎಆರ್ ಜೊತೆಯಲ್ಲಿ ಮಾತನಾಡಿ ಮೊನ್ನೆ 21ನೇ ಜುಲೈ ತಿಂಗಳಿನಲ್ಲಿ ಒಂದು ತೀರ್ಮಾನವನ್ನು ಮಾಡಿದ್ದೇವೆ. ನೇಮಕಾತಿಯನ್ನು ಮಾಡತಕ್ಕಂಥದ್ದಕ್ಕೆ ಸಮಿತಿಯನ್ನು ರಚನೆ ಮಾಡುತ್ತೇವೆ. ಆದರೂ ಕೂಡ ನಮಗೆ ಸರ್ವೇಯರ್ ಡಿಪ್ಲೊಮೊ ಪಾಸು ಮಾಡಿದಂಥವರು ಸಿಗುತ್ತಿಲ್ಲ. 95 ಜನ ಸಿಕ್ಕಿದ್ದಾರೆ ಅವರಿಗೆ ಇವತ್ತು ನಾವು ಮೈಸೂರಿನಲ್ಲಿ ತರಬೇತಿ ಕೊಡುತ್ತಿದ್ದೇವೆ. ಇವತ್ತಿನ ರೂಲ್ಸ್‌ನಲ್ಲೂ ಕೂಡ ರಿಲಾಕ್ಸ್ ಮಾಡಿದ್ದೇವೆ. ಪಿಯುಸಿ, ಗಣಿತ, ವಿಜ್ಞಾನ ಪಾಸು ಮಾಡಿದಂಥಹವರನ್ನೂ ಕೂಡ ಇದರಲ್ಲಿ ಭರ್ತಿ ಮಾಡತಕ್ಕಂಥದ್ದನ್ನೂ ಕೂಡ ಅಳವಡಿಸಿಕೊಂಡಿದ್ದೇವೆ. ಇದರಲ್ಲಿ ಏನು ಕೆಲವು ಎಡರುತೊಡರುಗಳಿದ್ದವೋ ಅವನ್ನೆಲ್ಲಾ ನಿವಾರಣೆ ಮಾಡಿದ್ದೇವೆ. ಮತ್ತು ಈಗ ಸ್ಟೇಟ್ ಲೆವಲ್ ರಿಕ್ರೂಟ್‌ಮೆಂಟ್ ಕಮಿಟಿ ಮಾಡಿದ್ದರೆ ಬೇರೆ ಕಡೆಯಲ್ಲಿ ಇರತಕ್ಕಂಥ ಜನರೂ ಅಲ್ಲಿಗೆ ಹೋಗುವುದಿಲ್ಲ ಎಂದು ಹೇಳಿ ಜಿಲ್ಲಾಮಟ್ಟದಲ್ಲಿ ಅದನ್ನು ಮಾಡುತ್ತಿದ್ದೇವೆ. ಆದರೂ ಕೂಡ ಈಗ ಸದ್ಯಕ್ಕೆ ಸರ್ವೇಯರ್ ಸಿಗುತ್ತಿಲ್ಲವಾದರಿಂದ ತೊಂದರೆಯಾಗುತ್ತಿದೆ ಎಂಬ ಮಾತು ಒಪ್ಪುತ್ತೇವೆ. ಆದರೆ ನಾವು ಅದೇ ರೀತಿ ಏನು ಸ್ಕೆಚ್ ಹಾಕಿ ಮಾಡಿದ್ದೇವೆ. ಆ ಸ್ಕೆಚ್ ಮೇಲೆ ನಾವು ಎಲ್ಲಾ ಕಡೆ ಸಾಗುವಳಿ, ಕೃಷಿ, ಬೇರೆ ಕೊಡತಕ್ಕಂಥದಕ್ಕೆ ಕೂಡ ನಾವು ಆದೇಶ ಕೊಟ್ಟಿದ್ದೇವೆ.